(02)

ದಿನಾಂಕ: 17.10.2020 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್.ಸಂಖ್ಯೆ.44 ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ. ಕೆ.ಎಂ ಯದುಕೃಷ್ಣ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀಮತಿ ರಶ್ಮೀ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಹಾಲಕ್ಷ್ಮೀಪುರಂ ಘನತ್ಯಾಜ್ಯ ನಿರ್ವಹಣೆ ವಿಭಾಗ
4. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
5. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
6. ಶ್ರೀ ಜಿ.ಕೆ ವೆಂಕಟೇಶ್, ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
7. ಶ್ರೀ ಮಲ್ಲಯ್ಯ ವಲಯ ಅರಣ್ಯಾ ಸಂರಕ್ಷಣಾ ಸಹಾಯಕರು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
8. ಶ್ರೀ ಲೋಕೇಶ್ ಪಶು ಸಂಗೋಪನಾ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
9. ಏ.ಎಸ್.ಐ ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆ.
10. ಏ.ಎಸ್.ಐ ಮಹಾಲಕ್ಷ್ಮೀ ಲೇಔಟ್ ಪೋಲೀಸ್ ಠಾಣೆ.
11. ಶ್ರೀ ಹರ್ಷ ಬಿ ಕಂದಾಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ. ಯದುಕೃಷ್ಣ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು.

ಸರ್ವ ಅಧೀಕಾರಿಗಳ ಸಮ್ಮುಖದಲ್ಲಿ ಮಾನ್ಯ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಕೋವಿಡ್–19ಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಶುಚಿತ್ವ, ಸ್ಯಾನಿಟೈಸರ್‌ನಿಂದ ಆಗಾಗ್ಗೆ ಕೈತೊಳೆದುಕೊಳ್ಳುವುದು, ಮನೆಯಿಂದ ಹೊರಗೆ ಗುಂಪು ಗುಂಪಾಗಿ ಸೇರಬಾರದು, ಸಭೆ ಸಮಾರಂಭಗಳಲ್ಲಿ ಹೆಚ್ಚಾಗಿ ಜನ ಭಾಗವಹಿಸಬಾರದು, ಮತ್ತು ಆರೋಗ್ಯ App ಸರ್ಕಾರ ನಿಯಮದಂತೆ ಮೊಬೈಲ್‌ಗಳಲ್ಲಿ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಎಂದು ಸೂಚಿಸಿದರು.

1. ಅಧ್ಯಕ್ಷರು ಸಭೆಯಲ್ಲಿ ಕಾಮಗಾರಿ ಇಲಾಖೆ ರವರನ್ನು ಕಾಮಗಾರಿಗಳ ವಿವರ, ರಸ್ತೆ ಗುಂಡಿಗಳ ವಿವರ ಹಾಗೂ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಪ್ರಶ್ನಿಸಲಾಯಿತು, ಇದಕ್ಕೆ ಉತ್ತರಿಸಿ ವಾರ್ಡ್ ಸಹಾಯಕ ಅಭಿಯಂತರರು ಕಾಮಗಾರಿಗಳ ವಿವರಗಳ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲಾಗುವುದು ಎಂದು ತಿಳಿಸುತ್ತಾ, ರಸ್ತೆ ಗುಂಡಿಗಳ ಸುಮಾರು ಶೇಕಡ 80 ರಷ್ಟು ಮುಚ್ಚಲಾಗಿದ್ದು ಬಾಕಿ ಶೇಕಡ 20 ರಷ್ಟು ಮುಂದಿನ ದಿನಗಳಲ್ಲಿ ಮುಚ್ಚಲಾಗುವುದು ಎಂದು ತಿಳಿಸಲಾಯಿತು. ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸಲು ಪೋಲೀಸ್ ಅಧಿಕಾರಿಗಳ ಸಹಾಯ ಬೇಕು ಎಂದು ತಿಳಿಸಿದರು.

Scanned with CamScanner

2. ಅಧ್ಯಕ್ಷರು ಸಭೆಯಲ್ಲಿ ಪೋಲೀಸ್ ಇಲಾಖೆ ರವರಿಗೆ ಪಾದಚಾರಿಗಳ ಮಾರ್ಗ ಒತ್ತುವರಿಯನ್ನು ತೆರವುಗೊಳಿಸಲು, ಬಿಬಿಎಂಪಿ ಅಧಿಕಾರಿಗಳಿ ಸಹಕಾರ ನೀಡಬೇಕೆಂದು ಸೂಚಿಸಿದರು ಹಾಗೂ ಮಾಸ್ಕ್ ಧರಿಸದೇ ಇರುವವರಿಗೆ ಧಂಡ ವಿಧಿಸಿ ಒಂದು ದಂಡ ಕಟ್ಟಿದ ನಂತರ ಒಂದು ಮಾಸ್ಕ್‌ನ್ನು ಉಚಿತವಾಗಿ ನೀಡಬೇಕು ಮತ್ತು ಸಾರ್ವಜನಿಕರಿಗೆ ಮಾಸ್ಕ್ ಧರಿಸುವ ಬಗ್ಗೆ ಜಾಗೃತಿಯನ್ನು ಮೂಡಿಸಬೇಕು ಎಂದು ಸೂಚಿಸಿದರು. ಆರ್.ಎಂಸಿ ಯಾರ್ಡ್‌ಗೆ ಸಂಬಂಧಿಸಿದ ಪೋಲೀಸ್ ಅಧಿಕಾರಿಗಳಿಗೆ ಆರ್.ಎಂಸಿ ಯಾರ್ಡ್‌ನಲ್ಲಿ ತರಕಾರಿ ವ್ಯಾಪಾರಿಗಳು ಘನತ್ಯಜ್ಯವನ್ನು ಪಾದಚಾರಿ ಮಾರ್ಗಗಳು ಹಾಗೂ ಸಾರ್ವಜನಿಕರು ಸಂಚರಿಸುವ ರಸ್ತೆಗಳಲ್ಲಿ ಹಾಕುತ್ತಿರುತ್ತಾರೆ. ಆದ್ದರಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ವಿಭಾಗ ರವರ ಜೊತೆ ಸೇರಿ ಸಮಸ್ಯೆಯನ್ನು ಪರಿಹರಿಸಿ ಎಂದು ಹೇಳಿದರು.

3. ಅಧ್ಯಕ್ಷರು ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋವಿಡ್ ಸಂಬಂಧಿತ ಮಾಹಿತಿಯನ್ನು ನೀಡುವಂತೆ ಸೂಚಿಸಿದರು.

   ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್ ಸಂಬಂಧಿತ ಮಾಹಿತಿಯನ್ನು ನೀಡಿದರು ಹಾಗೂ ಪ್ರತಿ ದಿನ ಸಂಬಂದಪಟ್ಟ ಅಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

4. ಅಧ್ಯಕ್ಷರು ಸಭೆಯಲ್ಲಿ ಕಂದಾಯ ಪರಿವೀಕ್ಷಕರಿಗೆ ಕಂದಾಯ ವಸೂಲಾತಿ ಬಗ್ಗೆ ಹಾಗೂ ಕಂದಾಯ ಪಾವತಿಸದಿರುವುವವರ ಮಾಹಿತಿಯನ್ನು ಸಂಬಂಧ ಪಟ್ಟ ಅಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಿದರು.

   ಕಂದಾಯ ಪರಿವೀಕ್ಷಕರು ಈಗಾಗಲೇ ಕಂದಾಯ ವಸೂಲಾತಿಯನ್ನು ಮಾಡಲಾಗಿದ್ದು, ಕಂದಾಯ ಪಾವತಿ ಮಾಡದಿರುವವರ ವಿರುದ್ಧ್ ನೋಟೀಸ್ ಜಾರಿಮಾಡಲಾಗಿರುತ್ತದೆ ಮತ್ತು ಸಂಬಂಧ ಪಟ್ಟ ಅಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ ಎಂದು ತಿಳಿಸಿದರು.

5. ಅಧ್ಯಕ್ಷರು ಸಭೆಯಲ್ಲಿ ವಲಯ ಅರಣ್ಯ ಸಂರಕ್ಷಕರಿಗೆ ಮುರಿದು ಬಿದ್ದ ಮರಗಳನ್ನು ಕಟಾವು ಮಾಡಿ ಸರಿಯಾದ ಜಾಗದಲ್ಲಿ ಹಾಕುವಂತೆ ಸೂಚಿಸಿದರು.

   ವಲಯ ಅರಣ್ಯ ಸಂರಕ್ಷಕರು ಮುರಿದು ಬಿದ್ದ ಮರಗಳನ್ನು ಕಟಾವು ಮಾಡಿ ಸರಿಯಾದ ಜಾಗದಲ್ಲಿ ಹಾಕಲಾಗುತ್ತಿದೆ ಹಾಗೂ ಕಾಟುವು ಮಾಡಿದ ಮರಗಳ ಸೊಪ್ಪನ್ನು ಘನತ್ಯಾಜ್ಯ ರವರಿಗೆ ತೆಗೆಯಲು ಕೋರಿದರು. ಘನತ್ಯಾಜ್ಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತೆಗೆಯುತ್ತೇವೆ ಎಂದು ಉತ್ತರಿಸಿದರು.

6. ಅಧ್ಯಕ್ಷರು ಸಭೆಯಲ್ಲಿ ಪಶು ಸಂಗೋಪನ ಪರಿವೀಕ್ಷಕರಿಗೆ ನಾಯಿಗಳಿಗೆ ಔಷದಿಗಳನ್ನು ಅಳವಡಸಬೇಕು, ಬೀದಿ ನಾಯಿಗಳಿಂದ ಬೈಕ್ ಸಂಚಾರಿಗಳಿಗೆ ತುಂಬ ತೊಂದರೆಯಾಗಿತ್ತಿದೆ, ಹಸುಗಳ ಸಂಖ್ಯೆ ಹಾಗೂ ಸತ್ತುಹೋದ ಹಸುಗಳನ್ನು ತೆಗೆದುಹಾಕಬೇಕು ಎಂದು ಸೂಚಿಸಿದರು. ಇದರ ಬಗ್ಗೆ ಸಾರ್ವಜನಿಕರ ಹಾಗೂ ಸಂಚಾರ ಪೋಲೀಸರಿಂದ ದೂರು ಬಂದಿರುತ್ತಿದೆ ಎಂದು ಸೂಚಿಸಿದರು. ಹಾಗೂ ಮಾಂಸದ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಎಲ್ಲಿ ಹಾಕಬೇಕು ಎಂದು ಸೂಚಿಸಿರುತ್ತೀರಿ ಎಂದು ಕೇಳಿದರು.

   ಪಶು ಸಂಗೋಪನ ಪರಿವೀಕ್ಷಕರು ನಾಯಿಗಳಿಗೆ ಔಷದಿಗಳನ್ನು ಒಂದು ವರ್ಷಕ್ಕೊಮ್ಮೆ ಲಸಿಕೆಯನ್ನು ನೀಡಿ ಒಂದು ವಾರದ ನಂತರ ನಾಯಿಯನ್ನು ಹಿಡಿದು ತಂದ ಸ್ಥಳದಲ್ಲಿ ಬಿಡಲಾಗುತ್ತದೆ ಮತ್ತು ಹಸುಗಳ ಬಗ್ಗೆ ವಿವರಗಳು ನಮ್ಮ ಕಛೇರಿ ವ್ಯಾಪ್ತಿಗೆ ಬರುವುದಿಲ್ಲ ಅದಕ್ಕೆ ಸಂಬಂದಪಟ್ಟಂತೆ

Scanned with CamScanner

ಪ್ರತ್ಯೇಕ ಕಛೇರಿ ಇರುತ್ತದೆ ಅದರ ವಿವರ ಮುಂದಿನ ಸಭೆಯಲ್ಲಿ ನೀಡುತ್ತೇವೆ ಎಂದು ತಿಳಿಸಿದರು. ಮಾಂಸದ ಅಂಗಡಿಯಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ತೆಗೆಯುವುದು ನಮಗೆ ಸಂಬಂದಪಟ್ಟಿಲ್ಲ ಎಂದು ತಿಳಿಸಿದರು.

7. ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂದಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.
8. ಅಧ್ಯಕ್ಷರು ಸಭೆಯಲ್ಲಿ ಹೊಸದಾಗಿ ನೇಮಿಸಿರುವ ವಾರ್ಡ್ ಕಮಿಟಿ ಸದಸ್ಯರುಗಳನ್ನು ಮುಂದಿನ ವಾರ್ಡ್ ಕಮಿಟಿ ಸಭೆಗೆ ಹಾಜರಾಗುವಂತೆ ಸೂಚಿಸಿಲು ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ. ಕಾರ್ಯದರ್ಶಿಗಳು ವಾರ್ಡ್ ಕಮಿಟಿ ಸಭೆಗೆ ಹಾಜರಾಗುವಂತೆ ಸೂಚಿಸುತ್ತೇನೆ ಎಂದು ತಿಳಿಸಿದರು.

K.M. [signature]
ಕಾರ್ಯದರ್ಶಿಗಳು.
ವಾರ್ಡ್ ಸಂಖ್ಯೆ 44

ಅಧ್ಯಕ್ಷರು
[signature]
ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner